

# ‘ಕರ್ನಾಟಕದ ಕಾಶ್ಮೀರ’ದಲ್ಲಿ..

★ ರಾಘವೇಂದ್ರ ತೊಗರ್ಸಿ

ಸದಾ ಚಳಿಯನ್ನು ಹೊದ್ದು ಮಲಗಿರುವ ಮಡಿಕೇರಿ. ವೈನ್‌ಗೆ ಮನೆಮಾತಾಗಿರುವ ಕೊಡಗು ಘಮ್ಮೆನ್ನುವ ಕಿತ್ತಳೆಗೂ ಖ್ಯಾತಿ. ಕಿತ್ತಳೆ ಕಾಲಾವಧಿಯ ಬೆಳೆ; ವೈನ್ ಮಾತ್ರ ವರ್ಷದ ಎಲ್ಲಾ ಕಾಲವೂ ಲಭ್ಯ. ವಿವಿಧ ಸ್ವಾದದ, ವೈವಿಧ್ಯ ರುಚಿಯ ವೈನ್ ಇಲ್ಲಿಯ ಮತ್ತೊಂದು ವೈಶಿಷ್ಟ್ಯ.

ಸೊಬಗಿನ ಕೊಡಗು ಒಂದು ದಿನ ವಿಹಾರಕ್ಕೂ, ವಾರಗಟ್ಟಲೇ ಪ್ರವಾಸಕ್ಕೂ ಸೈ. ಸಾಹಸಿಗರಿಗೆ ಟ್ರೆಕಿಂಗ್ ಅವಕಾಶ ಹೇರಳ. ‘ಕ್ಲಬ್ ಮಹೇಂದ್ರ’ದಂತಹ ಹಲವು ಪ್ರವಾಸಿ ರೆಸಾರ್ಟ್‌ಗಳು ಇಲ್ಲಿನ ಮುಖ್ಯ ಆಕರ್ಷಣೆ. ಅಲ್ಲಿ ಸಾಹಸಕ್ರೀಡೆಗಳೂ ಇವೆ. ಕ್ರೀಡೆ, ಈಜಾಟ, ಪರಿಸರ, ವನ, ಬೆಳೆಯನ್ನು ಪರಿಚಯಿಸಲು ಮಾರ್ಗದರ್ಶಕರೂ ಇದ್ದಾರೆ. ಆರೋಗ್ಯ ಪ್ರವಾಸಕ್ಕೂ ಇಲ್ಲಿನ ಮಂಜು ಮುಸುಕಿದ ಹಸಿರ ವನಸಿರಿ ಸಾಕ್ಷಿಯಾಗಿದೆ. ಜನ ಸಂಪರ್ಕದಿಂದ ನಾಲ್ಕು ದಿನ ದೂರ ಇರೋಣ ಎನ್ನುವವರಿಗೆ ದುರ್ಗಮ ಗಿರಿ ಕಂದರದ ಮಡಿಲೊಳಗೆ ಸುಖಿಸಲು ಹೇಳಿ ಮಾಡಿಸಿದ ತಾಣ. ವರ್ಷದ ಯಾವ ಕಾಲ, ಸಂದರ್ಭದಲ್ಲಾದರೂ ಮಡಿಕೇರಿಗೆ ಹೋಗಬಹುದು.

ಮಡಿಕೇರಿಯ ರಾಜಾ ಸೀಟ್: ಸದಾ ತಂಗಾಳಿ ಸೂಸುವ, ಸಂಜೆಯಾದರೆ ಮಂಜಿನ ಮಳೆಗರೆಯುವ ಅಪರೂಪದ ತಾಣ. ಮಡಿಕೇರಿಯ ದೊರೆ ನಿತ್ಯ ಸಂಜೆ ಎತ್ತರದ ಈ ಸ್ಥಳದಲ್ಲಿ ಕುಳಿತು ಸೂರ್ಯಾಸ್ತವನ್ನು ನೋಡುತ್ತಿದ್ದರಂತೆ. ಅದರ ನೆನಪಿಗೆ ಅರಸ ಕೂರುವ ಸ್ಥಳದಲ್ಲಿ ಪುಟ್ಟ ಸ್ಮಾರಕ– ಚಿಕ್ಕದೊಂದು ಉದ್ಯಾನ. ರಾಜಾ ಸೀಟಿನಲ್ಲಿ ವಿಹರಿಸಿ, ಸೂರ್ಯಾಸ್ತ, ಹಸಿರ ಪರ್ವತಗಳ ಗಿರಿ ಶಿಖರಗಳ ತೋರಣ ನೋಡಿದರೆ ಕಣ್ಣು ತಂಪಾಗದೆ ಇರದು. ಕತ್ತಲಾವರಿಸುವ ಹೊತ್ತಿಗೆ ಒಂದು ಸುತ್ತು ಪಟ್ಟಣ ಹೊಕ್ಕರೆ, ಹಾದಿ– ಬೀದಿಯ ಸುತ್ತ ಕಣ್ಸೆಳೆಯುವ ಏಲಕ್ಕಿ, ಕಾಳುಮೆಣಸು, ಜೇನು ತುಪ್ಪ, ಘಂ ಎನ್ನುವ  ಮಸಾಲೆ ಪದಾರ್ಥಗಳು! ಅಂದ ಹಾಗೆ ಈಗ ಮಡಿಕೇರಿಯಲ್ಲಿ ರುಚಿಕರ ಅಡುಗೆ ಬಡಿಸುವ ಹತ್ತಾರು ರೆಸ್ಟೋರೆಂಟ್‌ಗಳಿವೆ.



ಬೈಲುಕುಪ್ಪೆಯ ಗೋಲ್ಡನ್ ಟೆಂಪಲ್



ಮಡಿಕೇರಿಯ ಓಂಕಾರೇಶ್ವರ ದೇವಸ್ಥಾನ